ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

5ನೇ ವರ್ಷ 24ನೇ ಸಂಚಿಕೆ ಕೊಪ್ಪ 1-3-1987 ಭಾನುವಾರ ಬೆಲೆ 50 ಪೈಸೆ

ಏಲಕ್ಕಿ ಧಾರಣೆ

ಸಕಲೇಶಪುರ

ತಾರೀಕು	ಗರಿಷ್ಠ	ಸರಾಸರಿ
16.2.87	208	114
17.2.87	194	115
18.2.87	204	120
19.2.87	201	112
20.2.87	211	124

ಸರ್ವೋದಯ ಯುವಕ ಸಂಘ, (ರಿ.) ಬಾಳಗಡಿ

ಕೊಪ್ಪ ತಾಲ್ಲೂಕು

ಲಾಟರಿ ಫಲಿತಾಂಶ

ತಾ|| 25 2.87ರಂದು ನಡೆದ ಸಂಘದ ಅದೃಷ್ಟ ಬಹುಮಾನ ಯೋಜನೆಯ ಫಲಿತಾಂಶ ಈ ಕೆಳಗಿನಂತಿವೆ:

I ಸ್ಟೀಲ್ ಡ್ರಂ – 1752

II ವಿದ್ಯುತ್ ಇಸ್ತ್ರಿ ಪೆಟ್ಟಿಗೆ – 3177

III ಸ್ಟೀಲ್ ಮಡಚುವ ಖುರ್ಚಿ – 2887

ಐದು ಸಮಾಧಾನಕರ ಬಹುಮಾನಗಳು:

1. 2408, 2 1298, 3. 2991

4. 2447, 5. 0254

ಬಹುಮಾನ ವಿಜೇತರು ತಾ|| 25.3.1987ರ ಒಳಗಾಗಿ ಪಡೆಯತಕ್ಕದ್ದು.

ಟಿಕೇಟ್ ಪಡೆದು ನಮಗೆ ಸಹಕರಿಸಿದ ಎಲ್ಲಾ ಮಹನೀಯರುಗಳಿಗೂ ನಮ್ಮ ಕೃತಜ್ಞತೆಗಳು.

ಅಧ್ಯಕ್ಷರು ಮತ್ತು ಸದಸ್ಯರುಗಳು,
ಸರ್ವೋದಯ ಯುವಕ ಸಂಘ, ಬಾಳಗಡಿ

ಯಾರಿಗೂ ಪ್ರಾಣಾಪಾಯವಿಲ್ಲ, ಆದರೂ.....

ಶೃಂಗೇರಿಯಲ್ಲಿ ದುರಂತ ಶಿವರಾತ್ರಿ: ಭೀಕರ ಅಪಘಾತಕ್ಕೀಡಾಯಿತು 'ಮೈತ್ರಿ'

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ಶಿವರಾತ್ರಿಯ 'ಪುಣ್ಯ ದಿನ' ಶೃಂಗೇರಿ 'ಪುಣ್ಯಕ್ಷೇತ್ರ'ಕ್ಕೆ ಬಂದು 'ಪುಣ್ಯ ಕಟ್ಟಿಕೊಂಡು' ಹೊರಟಿದ್ದ 60ಕ್ಕೂ ಹೆಚ್ಚು ಜನ ಭೀಕರ ಅಪಘಾತಕ್ಕೀಡಾಗಿ ಅವರ ಬಂಧು-ಬಳಗದವರು ಪಾಪ ! ದುರಂತಮಯ ಶಿವರಾತ್ರಿ 'ಆಚರಿಸು'ವಂತಾಯಿತು....

ಅವರನ್ನು ಹೊತ್ತೊಯ್ಯುತ್ತಿದ್ದ 'ಮೈತ್ರಿ ಮೋಟಾರ್ಸ್' ಬಸ್ಸು ಕಾವಡಿ – ಅಡ್ಡಗದ್ದೆ ಮಧ್ಯೆ ದಂಡಿನ ಬೆಟ್ಟದ ಬಳಿ ಬ್ರೇಕ್ ವಿಫಲತೆಯಿಂದ ರಸ್ತೆಯ ಮೇಲೆ 3 ಮಡ (ಒಂದೂವರೆ ಸುತ್ತು) ಹೊಳಕೆ ನುಜ್ಜುಗುಜ್ಜಾಯಿತು.

ಇದರೊಂದಿಗೇ, ಹಿಂದೆ ಉದಯ ಬಸ್ಸಿನ ಕಂಡಕ್ಟರಾಗಿದ್ದು, ಈಚೆಗೆ ಇನ್ನೊಬ್ಬ ಪಾಲುದಾರರೊಂದಿಗೆ ಈ ಹಳೇ 'ಸ್ವಂತ' ಬಸ್ ಕೊಂಡುಕೊಂಡು ನಡೆಸುತ್ತಿದ್ದ ವಿಶ್ವನಾಥ್ ಅವರ ಬದುಕಿನ ಏಳ್ಗೆಯ ಕನಸೂ ನುಚ್ಚುನೂರಾಯಿತು....

ತೀವ್ರ ಗಾಯಗೊಂಡ ಮೂವರನ್ನು ಮಣಿಪಾಲಕ್ಕೆ ಕಳಿಸಲಾಗಿದ್ದು. 27 ಜನರಿಗೆ ಧನ್ವಂತರಿ ಆಸ್ಪತ್ರೆಯಲ್ಲೂ 26 ಜನರಿಗೆ ಸರ್ಕಾರಿ ಆಸ್ಪತ್ರೆಯಲ್ಲೂ ಚಿಕಿತ್ಸೆ ನೀಡಿದರೆ, ಬಸ್ ಅಪಘಾತದಿಂದಲೂ ಪ್ರಯಾಣಿಕರಿಂದಲೂ ತೀವ್ರ ರೂಪದ ಹೊಡೆತ ತಿಂದ ಬಡಪಾಯಿಗಳಾದ ಕಂಡಕ್ಟರ್ ಮತ್ತು ಕ್ಲೀನರ್ ಕುಮಾರ್ ಇವರನ್ನು ತೀರ್ಥಹಳ್ಳಿ ಆಸ್ಪತ್ರೆಗೆ ಸಾಗಿಸಲಾಯಿತು.

ಡ್ರೈವರ್ ಸಲೀಂ (ಶಿವಮೊಗ್ಗ) ಆತನು ಛಿವಿಯಾಗಿದ್ದುದಲ್ಲದೆ, ಸುಸ್ಥಿತಿಯಲ್ಲೂ ಇಲ್ಲದ ಬಸ್ಸನ್ನು ಕಂಡಾಪಟ್ಟೆ ಓಡಿಸಿ ಅಪಘಾತಕ್ಕೀಡುಮಾಡಿದರೆಂದು ಪ್ರಯಾಣಿಕರಿಂದ ಹೊಡೆತ ತಿಂದು ತಲೆ ತಪ್ಪಿಸಿಕೊಂಡಿದ್ದಾರೆ.

ಗಾಯಗೊಂಡವರಿಗೆಲ್ಲ ಚಿಕಿತ್ಸೆ ನೀಡಲು ಸಹಕರಿಸಿದ ಎಲ್ಲಾ ಸ್ಥಳೀಯ ವೈದ್ಯರಿಗೂ ಧನ್ವಂತರಿ ಆಸ್ಪತ್ರೆಯವರಿಗೂ ವೈದ್ಯಾಧಿಕಾರಿ ಡಾ|| ಲಕ್ಷ್ಮೀನಾರಾಯಣ್ ಕೃತಜ್ಞತೆ ಸಲ್ಲಿಸಿದ್ದಾರೆ.

ಬಸ್ಸಿನಲ್ಲಿ ಹೆಂಗಸರು, ಮಕ್ಕಳೇ ಹೆಚ್ಚಾಗಿ ತುಂಬಿದ್ದು, ಬಸ್ಸೂ ಓವರ್ ಲೋಡಾಗಿದ್ದರೂ ಯಾರಿಗೂ ಪ್ರಾಣಾಪಾಯವಾಗಿಲ್ಲ, ಯಾರೂ ಚಿಂತಾಜನಕ ಸ್ಥಿತಿಯಲ್ಲಿಲ್ಲ ಎಂಬುದೊಂದೇ ಸಣ್ಣ ಸಮಾಧಾನ.

ಸಹಕಾರಿ ರಂಗಕ್ಕೆ ಅಧಿಕಾರಿಗಳ ಅಸಹಕಾರ !?

ಕೊಪ್ಪ: ಈ ಸುತ್ತ ಮುತ್ತಲ ಹಾಲು ಉತ್ಪಾದಕರ ಅವಿರತ ಪ್ರಯತ್ನ ಹಾಗೂ ಅದಕ್ಕೆ ಪೂರಕವಾಗಿ ಶಾಸಕ ಗೋವಿಂದ ಗೌಡರು ವಹಿಸಿದ ಮುತುವರ್ಜಿಯಿಂದಾಗಿ ಸ್ಥಾಪನೆಗೊಂಡ (ಕೊಪ್ಪ ಮೇಲಿನ ಪೇಟೆಯಲ್ಲಿರುವ) ಇಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘ ನಿಧಾನವಾಗಿಯಾದರೂ ಏಕ ಪ್ರಕಾರವಾಗಿ ಹಾಲು-ಸಂಗ್ರಹಣೆ ಹೆಚ್ಚಿಸಿಕೊಳ್ಳುತ್ತಾ ಉತ್ತಮ ದಿನಗಳನ್ನು ಎದುರು ನೋಡತೊಡಗಿತ್ತು.

ಆದರೆ, ಹಿಂದೆ ಈ ಭಾಗದಲ್ಲಿ ಹೈನುಗಾರಿಕೆಯೇ ನೆಲ ಕಚ್ಚುವುದಕ್ಕೆ ಕಾರಣವಾದಂಥ ಹಾಲು ಉತ್ಪಾದಕರ ನಿಗಮದ ಅಧಿಕಾರಿಗಳ ಅಸಡ್ಡೆ ಮತ್ತು ಅವ್ಯವಸ್ಥಿತ ವ್ಯವಹಾರ, ವರ್ತನೆಗಳು ಈಗ ಮತ್ತೆ ಎದುರಾಗಿದ್ದು ಈ ಸಂಘವನ್ನು (ಹಾಗೇ ಬಹುಶಃ ಇನ್ನಿತರ ಸಂಘಗಳನ್ನೂ ಸಹ) ಕಂಗೆಡಿಸಿವೆ.

ಬೇಜವಾಬ್ದಾರಿ ವರ್ತನೆ; ಬಣ್ಣದ ಮಾತುಗಳ 'ಫ್ಲಡ್'

ಈ ಪರಿಸ್ಥಿತಿಗೆ ಅಸಡ್ಡೆ ಅಥವಾ ಬೇಜವಾಬ್ದಾರಿ ಎನ್ನದೆ ಇನ್ನೇನೆನ್ನಬೇಕೋ ಗೊತ್ತಾಗುತ್ತಿಲ್ಲ. ಏಕೆಂದರೆ ಮಾತೆತ್ತಿದರೆ, "ನಮ್ಮದು ಗುಜರಾತಿನ 'ಅಮುಲ್' ಮಾದರಿಯ ಸಂಸ್ಥೆ" ಎಂತಲೂ, 'ಆಪರೇಶನ್ ಫ್ಲಡ್', 'ಬಿಳಿ ಕ್ರಾಂತಿ', 'ವಿಶ್ವಬ್ಯಾಂಕ್ ನೆರವು' ಮುಂತಾಗಿಯೂ ಬಣ್ಣ ಬಣ್ಣದ ಮಾತುಗಳ 'ಫ್ಲಡ್'ನ್ನೇ ಹರಿಯ ಬಿಡುವ ಈ ಅಧಿಕಾರಿಗಳು, ಅಲ್ಲಿಯ ಸಹಕಾರ ಸಂಘಗಳಲ್ಲಿ **ಅಂದು ಹಾಕಿದ ಹಾಲಿಗೆ ಅಂದೇ ಪಶುಪಾಲಕರಿಗೆ ಹಣ ಸಂದಾಯವಾಗುತ್ತದೆ** ಎಂಬ 'ವ್ಯವಸ್ಥೆ'ಯನ್ನೂ ಮನಗಾಣಬೇಕಲ್ಲ !

ಹಣ, ಫೀಡ್ಸ್ ಬರುತ್ತಿಲ್ಲ

ಈ ಸಹಕಾರ ಸಂಘಕ್ಕೆ ಕಳೆದ 2 ತಿಂಗಳಿಂದಲೂ ಪಶು ಆಹಾರ ಸರಬರಾಜಾಗಿಲ್ಲ. ಸಂಘದ ಕಾರ್ಯದರ್ಶಿಯನ್ನು ಇದಕ್ಕಾಗಿಯೇ ಹಾಸನದವರೆಗೂ ಕಳಿಸಿದರೂ ಪ್ರಯೋಜನವಾಗಿಲ್ಲ. ಒಂದೂವರೆ ತಿಂಗಳಿಗೂ ಹೆಚ್ಚು ಕಾಲದಿಂದ ಹಾಲಿನ ಹಣ ಬಂದಿಲ್ಲ. ಜನವರಿ 16ರವರೆಗಿನ ಬಿಲ್ ಬಾಬ್ತು ಕೇವಲ 750 ರೂ.ಗಳ ಒಂದು ಪಾವತಿ ನಾಲ್ಕೈದು ದಿನಗಳ ಹಿಂದೆ ಬಂದಿದೆ. ಇದು ಕೂಡ ಅವರೆಗಿನ ಪೂರ್ತಿ ಬಟವಾಡೆ ಅಲ್ಲ, ಒಂದು ಸಣ್ಣ ಭಾಗ ಮಾತ್ರ.

ಜಿಡ್ಡು – ಜಿಗುಟು

ಇನ್ನು ಇಲ್ಲಿಂದ ಸರಬರಾಜಾಗುವ ಹಾಲಿನಲ್ಲಿ ಜಿಡ್ಡಿನ ಅಂಶ ಶೇ. 4 5ಕ್ಕಿಂತಲೂ ಹೆಚ್ಚೇ ಇರುತ್ತಾದರೂ ನಿಗಮದಿಂದ ದೊರಕುತ್ತಿರುವ ಬೆಲೆ ಕೇವಲ ಶೇ. 3 5ರಿಂದ 3 8ಕ್ಕೆ ಸಮನಾದಷ್ಟು ಮಾತ್ರ. ಏಕೆಂದರೆ ಬಾಳೆಹೊನ್ನೂರಿನಲ್ಲಿ ಜಿಡ್ಡಿನ ಪರೀಕ್ಷೆಯನ್ನೇ ಮಾಡುತ್ತಿಲ್ಲ. ಇದಕ್ಕೆ ಅಗತ್ಯವಾದ ಆಲ್ಕೋಹಾಲ್ ಅಲ್ಲಿ ಬಹಳ ಸಮಯದಿಂದಲೂ ಇಲ್ಲವೇ ಇಲ್ಲವಂತೆ. ಇಂಥ ಪರಿಸ್ಥಿತಿಯಲ್ಲಿ ಸಂಘವೇನಾದರೂ ಶೇ. 4.5ಕ್ಕೆ ಸರಿಯಾಗಿ ಬಟವಾಡೆ ಮಾಡಿದರೆ ಸಂಘಕ್ಕೆ ಕುತ್ತು; ಅವರು ಕೊಟ್ಟಷ್ಟನ್ನೇ ಸರಾಸರಿಯಾಗಿ ನೀಡಿದರೆ ಪಶುಪಾಲಕರಿಗೆ ತೀವ್ರ ನಷ್ಟ.

ಸಂಘದ ಬೈಲಾ ಪ್ರಕಾರ ಜಿಡ್ಡಿನ ಅಂಶದ ಆಧಾರದಲ್ಲೇ ಬಟವಾಡೆ ಆಗಬೇಕು ಹಾಗೂ ಪಶು ಆಹಾರ ಪೂರೈಕೆಯಾಗಬೇಕು ಎಂದಿದೆ. ಆದರೆ ಇದೆಲ್ಲ ಬಹುಶಃ ಈ 'ಫ್ಲಡ್' (ನೆರೆ ಅಥವಾ ಪ್ರವಾಹ) ಹಾವಳಿಯಲ್ಲಿ ಕೊಚ್ಚಿ ಹೋಗಿದೆ !

ಒಂದೆರಡು ಸಲಹೆಗಳು

ನಿಗಮದ ಅಧಿಕಾರಿಗಳು ತಮ್ಮದು ಅಸಡ್ಡೆಯ ವರ್ತನೆ ಅಲ್ಲ ಎನ್ನುವುದಾದರೆ ಮೊದಲು ಅಲ್ಲಿನ ವ್ಯವಹಾರ ಹಾಗೂ ನಿಗಮಕ್ಕೂ ಸಂಘಗಳಿಗೂ ನಡುವಿನ ವ್ಯವಹಾರ ವ್ಯವಸ್ಥಿತವಾಗಿ, ಸಮರ್ಪಕವಾಗಿ ನಡೆಯುವಂತೆ ಏರ್ಪಾಡು ಮಾಡಬೇಕು.

ನಿಗಮದವರು ಸಂಘಗಳಿಂದ ಪಡೆದ ಹಾಲನ್ನು ಮಾರಿದ್ದಕ್ಕೆ ಅವರಿಗೆ ಅಂದೇ ಹಣ ದೊರೆಯುತ್ತಿರುವಾಗ ಪಶುಪಾಲಕರ ಹೊಟ್ಟೆಯ ಮೇಲೆ ಹೊಡೆದು ಅವರ ಕಷ್ಟದ ಹಣದಲ್ಲಿ ತಾವು ವಹಿವಾಟು ನಡೆಸುವುದನ್ನು ನಿಲ್ಲಿಸಬೇಕು. ಹಾಗೆಯೇ, ಪ್ರತಿ ವಾರವೂ ಸಂಘಗಳಿಗೆ ಹಣ ಪೂರೈಸಲು ನಿ… ಗಮಕ್ಕೆ ತೊಂದರೆಯಿದ್ದಲ್ಲಿ, ಒಂದು ತಿಂಗಳ… ಗಾಗುವಷ್ಟು ಹಣವನ್ನಾದರೂ ಮೊದಲೇ ಸಂಘಕ್ಕೆ ನೀಡಿ ಅದರ ವಹಿವಾಟು ಸ್ಥಗಿತಗೊಳ್ಳುವಂತಾಗುವುದನ್ನು ತಪ್ಪಿಸಬೇಕು. ಅನಂತರವಾದರೂ ವಾರಕ್ಕಲ್ಲವಾದರೆ 15 ದಿನಕ್ಕೊಮ್ಮೆಯಾದರೂ ನಿಯಮಿತವಾಗಿ ಹಣ ಪಾವತಿಸಬೇಕು.

ಉದಾರತೆ ಅಲ್ಲ, ಕರ್ತವ್ಯ

ಈ ಹಿಂದೆ ವೀರಣ್ಣ ಶೆಟ್ಟಿಯವರು ವಿಸ್ತರಣಾಧಿಕಾರಿಯಾಗಿದ್ದ ಅವಧಿಯಲ್ಲಿ ಸ್ವಲ್ಪ ಮಟ್ಟಿಗೆ ಚೇತರಿಕೆಯಾಗುತ್ತಿದ್ದ **ಸಂಘಗಳು ಈಗ ಈ ದುಃಸ್ಥಿತಿಗೆ ಇಳಿಯುತ್ತಿರುವುದಕ್ಕೆ ಕಾರಣರಾದ ಅಧಿಕಾರಿಗಳು ಈ… ಬಗ್ಗೆ ಉದಾರತೆಯನ್ನೇನೂ ತೋರಿಸ… ಬೇಕಾಗಿಲ್ಲ; ಸಂಘಕ್ಕೆ ಬರಬೇಕಾದ ಹಣ, ಪಶು ಆಹಾರ ಇವನ್ನು ಸಕಾಲದಲ್ಲಿ ಕಳಿಸಬೇಕಾದ ಅವರ ಕರ್ತವ್ಯವನ್ನು ಮಾತ್ರ ಪೂರೈಸಿದರೆ ಸಾಕು. ಅವರಿಗೆ ಸಂಬಳ ಕೊಡುವುದೇ ಇದಕ್ಕೆ ಎಂಬುದು ನಿಜವಲ್ಲವಾದರೆ, ಕೇವಲ ಸಂಬಳ ಪಡೆಯುವುದು ಮಾತ್ರ ಅವರುಗಳಿಗೆ ವಹಿಸಲಾಗಿರುವ ಕರ್ತವ್ಯ ಎಂದಂತಾಗುತ್ತದೆ.**

ಈ ಸಮಸ್ಯೆಗಳು ಬಹುಶಃ ಇದೊಂದೇ ಸಂಘಕ್ಕೆ ಅಥವಾ ನಮ್ಮ ಜಿಲ್ಲೆಗೆ ಮಾತ್ರ ಸೀಮಿತವಲ್ಲದೆ, ರಾಜ್ಯದ ಇತರೆಡೆಗಳಲ್ಲೂ ಇರಬಹುದು. ನಮ್ಮ ಶಾಸಕರಾದರೂ ಸಂಘದ ಆರಂಭಕ್ಕೆ ಮುನ್ನ ವಹಿಸಿದಂಥ ಮುತುವರ್ಜಿಯನ್ನೇ ಪುನಃ ವಹಿಸಿ, ಅಗತ್ಯವಿದ್ದರೆ ಪುನಃ ಮಂತ್ರಿಗಳ ಮತ್ತು ನಿಗಮದ ಅಧ್ಯಕ್ಷರ ಮಟ್ಟದಲ್ಲೇ ಇದಕ್ಕೆ ಸೂಕ್ತ ಚಿಕಿತ್ಸೆ ಕೊಡಿಸಬೇಕು. (ಇದು ಕೂಡ ಅವರ… ಔದಾರ್ಯವಲ್ಲ, ಅವರ ಕರ್ತವ್ಯಗಳಲ್ಲಿ ಒಂದು ಎಂಬುದಕ್ಕಾಗಿ.)

ವರದಿ:
ಎಂ.ಆರ್. ಕಣ್ಣನ…

[ರಬ್ಬರು ಬೆಳೆಯ ಬಗ್ಗೆ ನಮ್ಮ ಈ… ಸಂಚಿಕೆಯಲ್ಲದೆ, 15.2.87 ಮತ್ತು 22 2.87ರ ಸಂಚಿಕೆಗಳನ್ನೂ ನೋಡಿ.

—ಸಂ.

ಕರ್ನಾಟಕದಲ್ಲಿ ರಬ್ಬರು ಬೆಳೆಯ ಆಶೋತ್ತರಗಳು

ಕರ್ನಾಟಕದ ಕರಾವಳಿಯ ಹಿನ್ನಾಡು ಉತ್ತಮವಾದ ರಬ್ಬರು ತೋಟಗಳನ್ನೆಬ್ಬಿಸಲು ಧಾರಾಳ ಅವಕಾಶವುಳ್ಳದ್ದಾಗಿದೆ. ಈಗಾಗಲೇ ದಕ್ಷಿಣಕನ್ನಡದ ಕೆಲ ಭಾಗಗಳಲ್ಲಿ ಮತ್ತು ಕೊಡಗಿನ ಬೆಟ್ಟಗಳ ತಗ್ಗು ಪ್ರದೇಶಗಳಲ್ಲಿ ಕಳೆದ ಐವತ್ತು ವರ್ಷಗಳಿಂದಲೂ ವಾಣಿಜ್ಯ ಬೆಳೆಯಾಗಿ ರಬ್ಬರು ಕೃಷಿಮಾಡುತ್ತಿದ್ದಾರೆ. ಮೊದ ಮೊದಲಿನ ರಬ್ಬರು ಕೃಷಿಗಳೆಲ್ಲಾ ಹೆಚ್ಚಾಗಿ ದೊಡ್ಡ ಪ್ಲಾಂಟೇಶನ್‌ಗಳಾಗಿದ್ದವು. ಈಚೆಗಿನ್ನ ದಿನಗಳಲ್ಲಿ ಚಿಕ್ಕ ಹಾಗೂ ಮಧ್ಯಮ ಗಾತ್ರದ ರಬ್ಬರು ತೋಟಗಳು ಎದ್ದು ಬರುತ್ತಿವೆ.

ಕರ್ನಾಟಕದಲ್ಲಿ 20 ಹೆಕ್ಟೇರಿಗಿಂತ ದೊಡ್ಡದಾಗಿರುವ ಒಟ್ಟು 24 ಎಸ್ಟೇಟುಗಳಲ್ಲಿ 7500 ಹೆಕ್ಟೇರುಗಳು ಹಾಗೂ 20 ಹೆ.ಗಿಂತ ಕಡಿಮೆ ವಿಸ್ತಾರವುಳ್ಳ ಸಣ್ಣ ಹಾಗೂ ಮಧ್ಯಮ ವಿಸ್ತಾರದ 1200 ತೋಟಗಳಲ್ಲಿ 3700 ಹೆ.ಗಳು–ಹೀಗೆ ಒಟ್ಟು 11,200 ಹೆ. ರಬ್ಬರು ಕೃಷಿ ಆಗುತ್ತಿದೆ. (ಒಂದು ಹೆಕ್ಟೇರು ಸುಮಾರು ಎರಡೂವರೆ ಎಕರೆಗೆ ಸಮ. 1 ಹೆಕ್ಟೇರ್ = 2.471 ಎಕರೆ)

ಈ ಪೈಕಿ ಈಗಾಗಲೇ ಫಸಲಿಗೆ ಬಂದಿರುವ ತೋಟಗಳು ಸುಮಾರು 5600 ಹೆ.ಗಳು. ಇದರಲ್ಲಿ ಸಿಗುವ ವಾರ್ಷಿಕ ಬೆಳೆ ಸರಾಸರಿ ಹೆಕ್ಟೇರೊಂದಕ್ಕೆ 730 ಕಿಲೋಗ್ರಾಂ ರಬ್ಬರು. ಆದರೆ, ಅಧಿಕ ಇಳುವರಿಯ ತಳಿಗಳನ್ನು ನೆಟ್ಟು, ಶಾಸ್ತ್ರೀಯ ಕೃಷಿ ಕಾರ್ಯಗಳನ್ನನುಸರಿಸುತ್ತಿರುವ ತೋಟಗಳಲ್ಲಿ ವಾರ್ಷಿಕ ಸರಾಸರಿ ಹೆ.ಗೆ 1500 ಕಿಲೋಗಳಾಗಿದೆ.

ನಮ್ಮಲ್ಲಿ ಹವಾಮಾನದಲ್ಲಿನ ಅನಿಷ್ಟ ವಿದ್ಯಮಾನಗಳು ರಬ್ಬರಿನ ಬೆಳವಣಿಗೆ, ಪುಷ್ಟಿ ಹಾಗೂ ಫಸಲನ್ನು ಕೂಡಾ ಸಾಕಷ್ಟು ಬಾಧಿಸುತ್ತವೆ. ಹಾಗಿದ್ದರೂ ಸೂಕ್ತವಾದ ಸಸ್ಯರಕ್ಷಣಾ ವಿಧಾನಗಳನ್ನನುಸರಿಸುವುದರಿಂದ ಈ ತೊಂದರೆಗಳನ್ನು ದೂರ ಮಾಡಲು ಸಾಧ್ಯ. ಬೇಸಗೆಯ ದಿನಗಳಲ್ಲಿ ಮಿತವಾಗಿ ನೀರೊದಗಿಸುವ ಮೂಲಕ ತೋಟದಲ್ಲಿ ನೆಟ್ಟ ಎಳೆ ಸಸಿಗಳು ಸಾಯುವುದನ್ನು ತಪ್ಪಿಸಬಹುದು. ಹಾಗೂ ಬೇಗನೆ ಬೆಳೆಯುವಂತೆ ಮಾಡಿ ಬೇಗನೆ ಫಲ ನೀಡುವಂತೆ ಕೂಡ ಮಾಡಲು ಸಾಧ್ಯವೆಂದು ಅನುಭವದಿಂದ ಕಂಡುಕೊಳ್ಳಲಾಗಿದೆ.

ರಬ್ಬರು ಬೆಳೆಗೆ ಆರಿಸಿಕೊಂಡ ನೆಲದ ಮೇಲ್ಪದರವನ್ನುಳಿಸಿಕೊಂಡು ಫಲವತ್ತಾಗಿ ಸಸಿ ಅಭಿವೃದ್ಧಿಪಡಿಸುವುದಕ್ಕಾಗಿ (ಮೆಟ್ಟಿಲು ವಿಧಾನ) ಕಂಟೂರ್ ಬಂಡ್ ಅಥವಾ 'ಟೆರೇಸ್'ಗಳ ನಿರ್ಮಾಣ ಮಾಡುವುದು ಮಾತ್ರವಲ್ಲ, ದ್ವಿದಳ ಧಾನ್ಯಗಳ ಮುಚ್ಚಿಗೆ ಬೆಳೆಗಳನ್ನೂ ಬೆಳೆಸಬೇಕಾದ್ದು ಅಗತ್ಯ.

ಕರ್ನಾಟಕದಲ್ಲಿ ರಬ್ಬರು ಬೆಳೆಯನ್ನು ಜನಪ್ರಿಯಗೊಳಿಸಿ ಧಾರಾಳವಾಗಿ ಬೆಳೆಸುವಂತೆ ಮಾಡುವ ಸಾಧನೆಗಾಗಿ ರಬ್ಬರ್ ಬೋರ್ಡು ರಬ್ಬರು ಬೆಳೆಯಬಹುದಾದ ಪ್ರದೇಶಗಳಲ್ಲೆಲ್ಲಾ ಅಲ್ಲಲ್ಲಿ ಭಾವೀ ರಬ್ಬರು ಬೆಳೆಗಾರರಿಗೆ ತಿಳುವಳಿಕೆ ನೀಡುವುದಕ್ಕಾಗಿ ಸಮೂಹ ಸಭೆಗಳನ್ನೇರ್ಪಡಿಸಿ ರಬ್ಬರಿನ ಲಾಭಾಂಶಗಳನ್ನು ಮನವರಿಕೆಯಾಗಿಸುವ ಚಟುವಟಿಕೆಗೆ ಮುಂದಾಗಿದೆ. ಈಗಾಗಲೇ ಕರ್ನಾಟಕದಲ್ಲಿ ಜಾರಿಗೆ ಬಂದಿರುವ ರಬ್ಬರ್ ಬೋರ್ಡಿನ "ರಬ್ಬರು ತೋಟಗಾರಿಕಾಭಿವೃದ್ಧಿ ಯೋಜನೆ"ಯಂತೆ ಈ ಕೆಳಗಿನ ಉತ್ತೇಜನಗಳನ್ನು ನೀಡುತ್ತಿದೆ:

ಅ) ರಬ್ಬರು ಫಸಲಿಗೆ ಬರುವವರೆಗಿನ ಮೊದಲ 7 ವರ್ಷಗಳ ಕಾಲದಲ್ಲಿ ತೋಟದ ಸ್ಥಾಪನೆ ಮತ್ತು ರಕ್ಷಣೆಯ ಖರ್ಚಿಗಾಗಿ ಕಂತು ಪ್ರಕಾರ ಹೆಕ್ಟೇರೊಂದಕ್ಕೆ ಒಟ್ಟು ರೂ. 5000ದಂತೆ ಮರುಪಾವತಿಯಿಲ್ಲದ ಸಹಾಯಧನ ನೀಡುತ್ತಿದೆ.

ಆ) ಮೇಲೆ ಹೇಳಿದ ಸಹಾಯಧನಕ್ಕೆ ಪೂರಕವಾಗಿ 7 ವರ್ಷಗಳಲ್ಲಿ ತೋಟ ನಿರ್ಮಾಣದ ಸಂಪೂರ್ಣ ಖರ್ಚನ್ನು ನಿರ್ವಹಿಸಲು ಅನುಕೂಲವಾಗುವಂತೆ ಬ್ಯಾಂಕುಗಳಿಂದ ಹೆಕ್ಟೇರೊಂದಕ್ಕೆ 22,000 ರೂ. ದೀರ್ಘಾವಧಿಯ ಸಾಲವನ್ನೊದಗಿಸಲಾಗುತ್ತದೆ. ಬ್ಯಾಂಕ್ ಸಾಲದ ಬಡ್ಡಿಯನ್ನು ಪ್ರಥಮದ ಏಳು ವರ್ಷಗಳ ಕಾಲ ಪಾವತಿಸಬೇಕಾದ್ದಿಲ್ಲ. ಈ ಏಳು ವರ್ಷಗಳ ಅವಧಿಯ ಬಡ್ಡಿಯನ್ನೆಲ್ಲಾ 8 ಮತ್ತು 9ನೇ ವರ್ಷದಲ್ಲಿ ಪಾವತಿಸುವ ಅನುಕೂಲವಿದೆ. ಸಾಲದ ಅಸಲು ಹಣವನ್ನು ಆಯಾ ವರ್ಷದ ಬಡ್ಡಿ ಸಮೇತ ಕೂಡಿಸಿ ಮುಂದಿನ 5 ವರ್ಷಗಳಲ್ಲಿ ಕಂತು ಪ್ರಕಾರ ಪಾವತಿ ಮಾಡಿದರೆ ಸಾಕು.

ಇ) ಮತ್ತೊಂದು ನಗದಿ ಸಹಾಯ ಧನವಾಗಿ ಬಡ್ಡಿಯಲ್ಲಿನ ಶೇ. 3 ಭಾಗವನ್ನು ರಬ್ಬರ್ ಬೋರ್ಡ್ ನೇರವಾಗಿ ಬ್ಯಾಂಕುಗಳಿಗೆ ನೀಡುತ್ತದೆ. ಇದರಿಂದ ಬೆಳೆಗಾರರು ತೆರಬೇಕಾದ ಬಡ್ಡಿ ದರ ಶೇ. ಒಂಬತ್ತೂವರೆ ಮಾತ್ರವಾಗುತ್ತದೆ.

ಈ) ನೆಡುವುದಕ್ಕಾಗಿ ಪ್ಲಾಸ್ಟಿಕ್ ಕೊಟ್ಟೆಗಳಲ್ಲಿಟ್ಟು ಚೆನ್ನಾಗಿ ಬೆಳೆಸಿ ಚಿಗುರು ಕಸಿ ಮಾಡಿದ ಗಿಡಗಳನ್ನು ಬಳಸಿಕೊಂಡರೆ ನೆಟ್ಟ ಪ್ರತಿ ಗಿಡಕ್ಕೂ ರೂ. 6ರಂತೆ ಸಹಾಯಧನ ಕೊಡಲಾಗುತ್ತದೆ. ಹೀಗೆ ಸಿಗುವ ಮೊತ್ತ ಹೆಕ್ಟೇರೊಂದಕ್ಕೆ ರೂ. 2700 ಆಗುತ್ತದೆ.

ಉ) ಎಲ್ಲಾ ಕೃಷಿ ಮಾಹಿತಿ ಮತ್ತು ಮಾರ್ಗದರ್ಶನವೂ ಉಚಿತ.

(ರಬ್ಬರು ಬೆಳೆಗೆ ಮೊದಲ 2 ವರ್ಷ ಗೊಬ್ಬರ ಇತ್ಯಾದಿ ಪೋಷಣೆ ಒದಗಿಸಬೇಕು. 3 ವರ್ಷದವರೆಗೆ ಗಿಡ ಹೆಚ್ಚು ವಿಶಾಲವಾಗಿ ಬೆಳೆದಿರುವುದಿಲ್ಲವಾದ್ದರಿಂದ ಶುಂಠಿ ಇತ್ಯಾದಿ ಉಪ ಬೆಳೆಗಳನ್ನು ಬೆಳೆಯಬಹುದು. ಅನಂತರ ಗಿಡ ಪೂರ್ತಿ ಬೆಳೆದಾದ ಮೇಲೆ ಪುನಃ ಉಪಬೆಳೆಗಳನ್ನು ಬೆಳೆಯಬಹುದು. ಆದರೆ ಸಸಿ ನೆಟ್ಟು 3 ವರ್ಷಕ್ಕಿಂತಲೂ ಮುಂದೆ ಹೀಗೆ ಉಪ ಬೆಳೆ ಬೆಳೆದರೆ ಸಬ್ಸಿಡಿ ನಿಲ್ಲಿಸಲಾಗುತ್ತದೆ.

ಈ ವಿಚಾರವನ್ನು ಕೊಪ್ಪದ ರೈತರ ಭೇಟಿ ಮಾಡಿದಾಗ ರಬ್ಬರು ಬೋರ್ಡಿನ ಹಿರಿಯ ಅಧಿಕಾರಿ ಪಾಲ್ ಅವರು ತಿಳಿಸಿದ್ದರು.–ಸಂ.)

ಖರ್ಚುಗಳು ಮತ್ತು ಆದಾಯಗಳು

ಕರ್ನಾಟಕದಲ್ಲಿ ರಬ್ಬರು ತೋಟ ನಿರ್ಮಾಣದ ಕ್ಷೇತ್ರ ಸಿದ್ಧತೆ, ನೆಡುವಿಕೆ ಮತ್ತು ಫಸಲಿಗೆ ಬರುವವರೆಗಿನ ಸಾಕಣೆ ಮೊದಲಾದ ಒಟ್ಟು ಖರ್ಚುಗಳು ಹೆಕ್ಟೇರ್ ಒಂದಕ್ಕೆ ರೂ. 27,700 ಎಂದು ಅಂದಾಜು ಮಾಡಲಾಗಿದೆ. ಯೋಗ್ಯ ರೀತಿಯಲ್ಲಿ ಕೃಷಿ ಕಾರ್ಯ ನಡೆಸಿಕೊಂಡು ಬರುವ ರಬ್ಬರು ತೋಟಗಳಿಂದ ಹೆಕ್ಟೇರೊಂದಕ್ಕೆ ಸರಾಸರಿ ವಾರ್ಷಿಕ ಬೆಳೆಯಾಗಿ 1500 ಕಿಲೋಗಳಷ್ಟು ಒಣ ರಬ್ಬರು ದೊರೆಯುತ್ತದೆ. ರಬ್ಬರು ಸಸಿ ನೆಟ್ಟ 8ನೆಯ ವರ್ಷದಿಂದ ತೊಡಗಿ 25 ವರ್ಷಗಳ ಕಾಲ ಲಾಭದಾಯಕವಾದ ಬೆಳೆ ಸಿಗುತ್ತದೆ. ಈಗಿನ ಮಾರುಕಟ್ಟೆ ದರದಂತೆ ರಬ್ಬರು ಕಿಲೋ ಒಂದಕ್ಕೆ ರೂ. 16ರಂತೆ ಹೆಕ್ಟೇರೊಂದಕ್ಕೆ (3ನೇ ಪುಟಕ್ಕೆ)

ನೂರರ ಅಂತರ

ಅಮೆರಿಕದ ಇಬ್ಬರು ಮಾಜಿ ಅಧ್ಯಕ್ಷರ ಜೀವನದಲ್ಲಿ ನಡೆದ ಹಲವು ಘಟನೆಗಳ ಸಾಮ್ಯ ಹಾಗೂ ನೂರರ ಅಂತರವನ್ನು ಗಮನಿಸಿ.

	ಅಬ್ರಹಾಂ ಲಿಂಕನ್	ಜಾನ್ ಎಫ್. ಕೆನೆಡಿ	
ಜನನ	1818ನೇ ಇಸವಿ	1918	100 ವರ್ಷಗಳ ಅಂತರ
ಮರಣ (ಕೊಲೆ)	1863	1963	100 ವರ್ಷಗಳ ಅಂತರ

ಲಿಂಕನ್ನರನ್ನು ಕೊಲೆ ಮಾಡಿದಾತನ ಜನನ	1829	100 ವರ್ಷಗಳ ಅಂತರ
ಕೆನೆಡಿಯನ್ನು ಕೊಲೆ ಮಾಡಿದಾತನ ಜನನ	1929	

ಇಬ್ಬರು ಅಧ್ಯಕ್ಷರೂ ಕೊಲೆಯಾದದ್ದು ಶುಕ್ರವಾರ ಮತ್ತು ಕೊಲೆಯಾಗುವಾಗ ಅವರ ಪತ್ನಿಯರು ಅವರ ಸಂಗಡವೇ ಇದ್ದರು.

ಇಬ್ಬರು ಕೊಲೆಗಾರರೂ ವಿಚಾರಣೆಗೆ ಮುಂಚೆಯೇ ಸ್ವತಃ ಕೊಲೆಯಾದರು.

ಸಂಗ್ರಹ : **ಹೊಸಮನೆ ಶೇಷಗಿರಿ.**

ಪದ್ಯದಂಕಣ

ಏನು ಸೊಗಸು!

ಮುಸ್ಸಂಜೆಯ ಹೊತ್ತಿನಲ್ಲಿ
ಪಡುವಣದಲ್ಲಿ ರವಿ ಮುಳುಗುತಿರಲು
ಬಾನೆಲ್ಲ ಹೊಂಬಣ್ಣ ತಾಳಿರಲು
ಹಸು ನಗುತ ಶಶಿ ಮೇಲೇರಿ ಬರುತಿರಲು–

ಬೆಟ್ಟ ಗುಡ್ಡಗಳ ದಾಡು
ನೀಲಿ ಕೆಂಪು ಬಾನಿನ ಮಧ್ಯೆ
ಬಿಳಿ ಮೋಡದ ತುಣುಕಿನೊಳಗೆ ನುಸುಳಿ
ಬರುತಿರುವ ಹಕ್ಕಿಗಳ ನೋಡಲೇನು
ಸೊಗಸು!

ಹಕ್ಕಿ ಬಿಚ್ಚಿ ಹಾರಾಡಿ
ಗಗನದಲ್ಲಿ ತೂರಾಡಿ
ಮನ್ನನೆ ತಿರುಗಾಡಿ
ಮೇಲಿನಿಂದ ಕೆಳಗೆ ಇಳಿಯುತಿರುವ–
ಹಕ್ಕಿಗಳ ನೋಡಲೇನು ಸೊಗಸು.

ದಂಡೆಯಲಿ ಕುಳಿತು ಮೈಮರೆತು
ತುಂಬಿದ ನೀರಿನ ಕೆರೆಯ ಮಧ್ಯದಲಿರುವ
ಗಿಡಗಳ ಟೊಂಗೆ ಟೊಂಗೆಯಲಿ
ಕುಳಿತು ಕೊರ್, ಕೊರ್ ಎಂದು
ಗದ್ದಲವೆಬ್ಬಿಸಿ ಮನವ ಸಂತಸಪಡಿಸುವ
ಹಕ್ಕಿಗಳ ನೋಡಲೇನು ಸೊಗಸು.

ಸ್ವಚ್ಛಂದವಾಗಿ ನಲಿದಾಡಿ
ಅಂಕೆ, ಅಂಕುಶಗಳಿಗೆ ಸಿಲುಕದೆ
ಮಾನವರಂತೆ ಇಚ್ಛಾಚರದೆ
ಸಾವಿರಾರು ಪಕ್ಷಿಗಳು ಒಟ್ಟಿಗೆ
ವಾಸಿಸುವುದ ನೋಡಲೇನು ಸೊಗಸು.

ಸಂಜೆ ಉಳುವೆಯಲಿ ಉಳಿದು
ಮುಂಜಾವಿನಲಿ ಆಹಾರ ಅರಸುತ್ತಾ
ಇಬ್ಬನಿಗಳ ನಡುವೆ ಸಾಲು
ಬೆಳ್ಳಕ್ಕಿಗಳು ಸಾಗುತಿರುವುದ
ನೋಡಲೇನು ಸೊಗಸು!

(ಶೃಂಗೇರಿ ಬಳಿಯ ಉಳುವೆಯಲ್ಲಿ ಅರಳಿರುವ 'ಬೆಳ್ಳಕ್ಕಿ ಧಾಮ' ವನ್ನು ಕುರಿತು.)

—ಉ. ಕೈ. ಶಾರದಾ,
ಉಳುವೆ–ಶೃಂಗೇರಿ

ಹದಿ ಹರಯ....!

ಮೊನ್ನೆ ಒಂದು ಪರಿಚಯದ ಅಂಗಡಿಯಲ್ಲಿ ಹೊಸ ಸೇಲ್ಸ್‌ಮನ್‌ನನ್ನು ಕಂಡು ನಾನು ವಿಚಾರಿಸಿದೆ–"ಹೋ, ಹೊಸ ಸೇಲ್ಸ್‌ಮನ್ನಾ ?" ಎಂದು.

ಅದಕ್ಕೆ ಮಾಲೀಕರೆಂದರು–"ಅವನೆಂಥ ಹೊಸಬನೋ? ಅಂವ ಹಳಬನೇ ಅಲ್ಲವೇನ್ರಿ?"

ನಾನು "ಅವನ್ನ ಹಳಬ ಅನ್ನೋರೆಲ್ಲ ಮಾಡಾಯ್ತು ? ಅವನಿನ್ನೂ ಹದಿಹರೆಯದ ಹುಡುಗ ! ?" ಅಂದೆ ತಮಾಷೆಗಾಗಿ.

ಆದಕ್ಕೆ ಆ ಹುಡುಗ–"ನಾನು ಯಾವ ಹದಿಹರೆಯದ ಹುಡುಗನೂ ಅಲ್ಲ. ನಾನು ಬೇಕಾದ್ರೆ 'ಬಿಳಿ ಹರೆಯದ ಹುಡುಗ' ಹೌದು, ನೋಡಿ !" ಎಂದು ತನ್ನ ಹರೆಯದ ಕೆನ್ನೆ ಸವರಿಸಿಕೊಳ್ಳುತ್ತಾ ಅಂದಾಗ ಅಂಗಡಿಯಲ್ಲಿದ್ದವರೆಲ್ಲ ಮುಸಿಮುಸಿಯೆ ನಕ್ಕೆವು

—'ತಂತ್ರಿ'

'ಕೈ' - ಕೆನೆಡಿ

ನಮ್ಮ 'ಕೈ' ಗೂ (ಕೈಲಾಸಂ) ಕೆನೆಡಿಗೂ ಇರುವ ಇಂಥದೇ 'ನಂಟು' ನೋಡಿ:

ಕೈಲಾಸಂ ಮರಣ ದಿನ ನವೆಂಬರ್ 23. ಕೆನೆಡಿ ಮರಣ ದಿನ ನವೆಂಬರ್ 23

ಕೈಲಾಸಂ ಮನೆಯ ಹೆಸರು ವೈಟ್ ಹೌಸ್ (ಚಾಮರಾಜಪೇಟೆ). ಕೆನೆಡಿ ಆವಾಸ ಸ್ಥಾನ ವೈಟ್ ಹೌಸ್ (ವಾಷಿಂಗ್‌ಟನ್)

ಇಬ್ಬರ ಹೆಸರಿನ ಆದಿಯೂ 'ಕೆ'.

ಇಬ್ಬರ ಮರಣವೂ 'ಗುಂಡಿ'ನಿಂದಲೇ. ರಾತ್ರಿ 'ಗುಂಡು' ಹಾಕಿ ಮಲಗಿದ 'ಕೈ' ಮೇಲೇಳಲೇ ಇಲ್ಲ!

ಕೆನೆಡಿ ಅಂತ್ಯಕ್ಕೂ ಹಂತಕನ ಗುಂಡೇ ಕಾರಣ.

(ಸೌಜನ್ಯ : 'ಗಾಂಧಿ ಬಜಾರ್')

ಮಕ್ಕಳ ಅಂಕಣ

'ಮುಂಜಾವು' ಓದುವ ಪ್ರೀತಿಯ ಮಕ್ಕಳೆ,

ನಮ್ಮ ಪತ್ರಿಕೆಯಲ್ಲಿ ಈಗ [illegible] ನಿಮ್ಮದೊಂದು ಅಂಕಣವನ್ನು ಆರಂಭಿಸೋಣವಾ? ನಿಮ್ಗೆ ಬೇಕು ತಾನೆ? ಹಾಗಾದರೆ ಆ ಅಂಕಣಕ್ಕೆ ಏನೆಂದು ಹೆಸರಿಡೋಣ? ಬೇರೆ ಪತ್ರಿಕೆಗಳಲ್ಲಿ 'ಚಿಲಿ-ಪಿಲಿ', 'ಬಾಲವನ', 'ಕುಣಿಯೋಣು ಬಾರಾ' ಇತ್ಯಾದಿ ಇತ್ಯಾದಿ ಚಂದಚಂದದ ಹೆಸರಿಟ್ಟಿದ್ದಾರೆ. ನಮ್ಮ ಪತ್ರಿಕೆಯಲ್ಲಿನ ನಿಮ್ಮ ಅಂಕಣಕ್ಕೂ [illegible] ಯಾವುದಾದರೊಂದು ಚಂದದ, ಹೊಸ ಹೆಸರನ್ನು ನೀವೇ ಸೂಚಿಸಿ. ನೋಡೋಣ! [illegible] ಸೂಚಿಸುವ ಹೆಸರು ಸೂಚಿಸಿದವರಿಗೆ ಬಹುಮಾನವೂ ಉಂಟು!

ಹೆಸರು ಯೋಚಿಸುವುದಕ್ಕೆ ಸ್ವಲ್ಪ ಸಹಾಯ ಬೇಕಾದರೆ ಮಾಡ್ತೀವಿ. ಈಗ ನೋಡಿ [illegible] ಹೂವುಗಳಿರುತ್ತವೆ; [illegible] ಸಂತೋಷ [illegible] ಮೊಗ್ಗುಗಳಿದ್ದಂತೆ– ಎಂದ [illegible] ಹೂಗಳು, ಮೊಗ್ಗುಗಳು [illegible] ಮಕ್ಕಳ ಮನಸ್ಸೂ [illegible] ಹೂ–ಮೊಗ್ಗುಗಳಲ್ಲಿ [illegible] ಪರಿಶುದ್ಧ. ಹಾಗೇ ಮಕ್ಕಳ [illegible] ಕಪಟವಿಲ್ಲದ ಪರಿಶುದ್ಧ ಮನಸ್ಸು [illegible] ಅಂಥ ಹೂವುಗಳು, ಮೊಗ್ಗುಗಳು ತುಂಬಿ ನಲಿಯುವ ಅಂಗಳ (ಅಂಕಣ) ಕ್ಕೆ ಏನೆಂತ ಕರೆಯೋಣ? [illegible], ಇಂಥದೇ ಸುಂದರವಾದ, ಮುದ್ದಾದ ಅರ್ಥ ಬರುವ ಯಾವುದಾದರೊಂದು ಹೆಸರು ಯೋಚಿಸುತ್ತೀರಾ?

ಯೋಚಿಸಿದರೆ ಸಾಲದು, ಅದನ್ನು ಬರೆದು ಮಾರ್ಚ್ 10ನೇ ತಾರೀಖಿನೊಳಗೆ ನಮಗೆ ತಲುಪುವಂತೆ ಕಳಿಸಬೇಕು. ಮಾ: 2–3ನೇ ತಾರೀಖಿನೊಳಗೇ ಯಾರಾದರೂ ಹೆಸರು ಸೂಚಿಸಿ ಅದು ಆಯ್ಕೆಯಾದರೂ ಆಗಿಬಿಟ್ಟೀತು! ಆದ್ದರಿಂದ ಬೇಗ ಕಳಿಸಿ, ಆಯ್ತಾ ?

ಇನ್ನು ಒಂದು ಸ್ವಲ್ಪ ಬೇಜಾರಿನ ವಿಚಾರ ಏನಪ್ಪಾ ಅಂದರೆ, ಈ ಅಂಕಣವನ್ನು ಪ್ರತಿ ವಾರ ಪ್ರಕಟಿಸಲು ಆಗುವುದಿಲ್ಲ... ಯಾಕೆಂದರೆ ನಮ್ಮದು ಏನೆಂದರೂ ಇನ್ನೂ ಚಿಕ್ಕ ಪತ್ರಿಕೆ ಅಲ್ವಾ ? (ಅದಕ್ಕಿನ್ನೂ ಐದೇ ವರ್ಷ!) ಆದ್ದರಿಂದ ಸದ್ಯಕ್ಕೆ ತಿಂಗಳಿಗೆ ಒಂದು ವಾರ ಮಾತ್ರ ಈ ಅಂಕಣ ಇರುತ್ತದೆ. ಮುಂದೆ ಅನುಕೂಲ, ಹೆಚ್ಚು ಸ್ಥಳಾವಕಾಶ ಸಿಕ್ಕಿದರೆ ತಿಂಗಳಿಗೆ ಎರಡು ವಾರ ಅಂಕಣ [illegible] ಸಲ ಪ್ರಕಟಿಸೋಣ, ಆಯ್ತಾ? ಸೀದಾ ಹೆಜ್ಜೆ ಹೆಜ್ಜೆಯಾಗಿಯೇ ಬೆಳೆಯೋದು? ಆದ್ದರಿಂದ ಸದ್ಯಕ್ಕೆ ತಿಂಗಳ ಮೊದಲ ವಾರದ 'ಮುಂಜಾವು'ನಲ್ಲಿ ಅರ್ಧ ಪುಟ ನಿಮಗೆ. ಸರಿಯಾ?

[illegible] ಹಾಂ, "ಅರ್ಧ ಪುಟ ನಮಗೆ!" ಅಂದುಕೊಂಡರೆ ಸಾಲದು, ಅದಕ್ಕಾಗುವಷ್ಟನ್ನು ನೀವೇ ಬರೆಯಬೇಕು ಮತ್ತೆ! ಅದೇನು ಮಹಾ ಎನ್ನುವ ಹಾಗಿಲ್ಲ. ಏಕೆಂದರೆ ಬರೆದಿದ್ದೆಲ್ಲ ಪ್ರಕಟವಾಗಲು ಸಾಧ್ಯವಿಲ್ಲ ಅಲ್ವ? ಈಗ ಉದಾಹರಣೆಗೆ– 8ನೇ ಕ್ಲಾಸಿನ ಹುಡುಗನೊಬ್ಬ,

ಬಾರೆ ಅಕ್ಕಾ
ಬೇಗ ಬೇಗ ಬಾ ಅಕ್ಕ
ಓದಿಸು ಅಕ್ಕ
ಬರೆಸು ಅಕ್ಕ....

ಅಂತ ಬರೆದ ಅನ್ನಿ. ಅದನ್ನು ನೀವಾದರೂ ಒಂದು ಕವನ ಅಂತ ಪ್ರಕಟಿಸಿಬಿಡ್ತೀರಾ? ಇಲ್ಲ ಅಲ್ವ? ಹಾಗೇನೆ, ಕವನವೇ ಆಗಲಿ, ಕತೆಯೇ ಆಗಲಿ, ನಗೆ ಹನಿಯೇ ಆಗಲಿ, ಸ್ವಲ್ಪ ನಿಮ್ಮ ವಯಸ್ಸಿಗೆ ತಕ್ಕಷ್ಟು ಚೆನ್ನಾಗಿರಬೇಕು. ಮತ್ತು ಬೇರೆ ಯಾವುದರಲ್ಲೋ ಬಂದಿದ್ದನ್ನು ಹಾಗೇ ಕಾಪಿ ಮಾಡಿದ್ದಾಗಿರಬಾರದು. ನಿಮ್ಮ ತಂದೆ–ತಾಯಿಯರೋ ಇನ್ಯಾರೋ ಹೇಳಿದ್ದನ್ನು ಕೇಳಿದ್ದಾದರೆ ಪರವಾ ಇಲ್ಲ. ಆಗ ಅದರ ಕೆಳಗೆ –(ಕೇಳಿದ್ದು)– ಅಂತ ಬರೆಯಬೇಕು. ಅದಕ್ಕಿಂತ ನೀವೇ ಸ್ವಂತವಾಗಿ ಯೋಚಿಸಿ, ಕಲ್ಪನೆ ಮಾಡಿ ಬರೆದುದಾದರೆ ಉತ್ತಮ. ಹಾಗೆ ಬರೆದುದನ್ನು ಮತ್ತೆ ಮತ್ತೆ ಓದಿ, ನಿಮಗೇ ನಿಜವಾಗಿಯೂ ಚೆನ್ನಾಗಿದೆ ಅನ್ನಿಸಿದರೆ ಗೆಳೆಯರಿಗೋ, ಅಣ್ಣ–ಅಕ್ಕಂದಿರಿಗೋ, ಮನೆಯಲ್ಲಿ ದೊಡ್ಡವರಿಗೋ ತೋರಿಸಿ, ಅವರೂ ಕೂಡ "ಪರವಾ ಇಲ್ಲ, ಕಳಿಸು" ಎನ್ನುವಂತೆ ಇದ್ದರೆ ಕಳಿಸಿ. ಅವರುಗಳು ಬೇಡ ಅಂದರೂ ಕಳಿಸಬಹುದು. ಆದರೆ ಅದು ನಿಮಗೇ ಚೆನ್ನಾಗಿದೆ ಅಂತ ಖಂಡಿತವಾಗಿ ಅನ್ನಿಸಿರಬೇಕು. ಬೇರೆ ಪತ್ರಿಕೆಗಳಲ್ಲಿ ಬರುತ್ತಿರುತ್ತದಲ್ಲ, ಅದಕ್ಕಿಂತ ಏನೂ ಕಮ್ಮಿಯಿಲ್ಲ ಅನ್ನಿಸಿರಬೇಕು. ಆಗ ಕಳಿಸಿ ನೋಡಬಹುದು.

ಒಟ್ಟಿನಲ್ಲಿ ಅದಷ್ಟೂ ನೀವೇ ಸ್ವಂತ ಬರೆದುದಕ್ಕೆ ಆದ್ಯತೆ. ಬೇರೆ ಯಾವುದೋ ಪುಸ್ತಕಗಳನ್ನು ಓದುವಾಗ ಇದು ಚೆನ್ನಾಗಿದೆ, ಇದು ವಿಶಿಷ್ಟವಾಗಿದೆ, ಈ ವಿಚಾರ ಹೆಚ್ಚು ಜನರಿಗೆ ತಿಳಿದಿರಲಿಕ್ಕಿಲ್ಲ, ತಿಳಿದರೆ ಚೆನ್ನ– ಅಂತ ಅನ್ನಿಸುವಂಥಾದ್ದನ್ನೂ ಸಂಗ್ರಹಿಸಿ ಕಳುಹಿಸಬಹುದು. ಅದಕ್ಕೆ –(ಸಂಗ್ರಹ)– ಅಂತ ಬರೆಯಬೇಕು. ಸಾಧ್ಯವಿದ್ದ ಕಡೆಯೆಲ್ಲ ಎಲ್ಲಿಂದ ಅಥವಾ ಯಾವ ಪುಸ್ತಕದಿಂದ ಸಂಗ್ರಹಿಸಿದ್ದು ಅಂತಲೂ ಬರೆದರೆ ಒಳ್ಳೆಯದು.

ಈ ಅಂಕಣದಲ್ಲಿ 12 ವರ್ಷದೊಳಗಿನ ಮಕ್ಕಳಿಗೆ ಮೊದಲ ಪಂಕ್ತಿ. ಅದಕ್ಕಿಂತ ಹೆಚ್ಚು ವಯಸ್ಸಿನವರೂ ಬರೆಯಬಹುದು. ನಿಮ್ಮ ಹೆಸರು, ವಯಸ್ಸು ಅಥವಾ ತರಗತಿ ಮತ್ತು ಊರು– ಇಷ್ಟು ಬರೆದಿರಲೇಬೇಕು.

ಇದಲ್ಲದೆ, ದೊಡ್ಡವರು ಕೂಡ ಮಕ್ಕಳಿಗಾಗಿ ಒಳ್ಳೊಳ್ಳೆಯ ರಂಜಕವಾದ ಅಥವಾ ಒಳ್ಳೆಯ ತಿಳುವಳಿಕೆಯಿಂದ ಕೂಡಿದ ವಿಚಾರಗಳನ್ನೂ, ಕತೆ ಮುಂತಾದುವನ್ನೂ ಬರೆಯಬಹುದು. ಆದರೆ ಅವು ಸರಳವಾಗಿದ್ದು, ಓದ ಬಲ್ಲ ಮಕ್ಕಳಿಗೆ ಇನ್ನೊಬ್ಬರ ಸಹಾಯವಿಲ್ಲದೆ ಸುಲಭದಲ್ಲಿ ಅರ್ಥವಾಗುವಂತಿರಬೇಕು. ಹೆಚ್ಚಾಗಿ 12 ವರ್ಷದೊಳಗಿನ ಮಕ್ಕಳಿಗೇ ಈ ಅಂಕಣ ಎಂಬುದು ಅವರಿಗೆ ನೆನಪಿನಲ್ಲಿರಲಿ.

ಇನ್ನೂ ಒಂದೆರಡು ಅಂಶಗಳಿವೆ. ಎಲ್ಲರೂ ಕವಿ, ಸಾಹಿತಿ, ಬರಹಗಾರರೇ ಆಗಬೇಕಾಗಿಲ್ಲ, ಹಾಗೆ ಆಗಲು ಸಾಧ್ಯವೂ ಇಲ್ಲ. ಒಬ್ಬೊಬ್ಬರಿಗೆ ಒಂದೊಂದು ರೀತಿಯ ಪ್ರತಿಭೆ ಇರಬಹುದು, ಅಲ್ವ ? ಆದರೆ, ಬರಹಗಾರರೇ ಆಗಬೇಕೆಂದಿದ್ದವರು ಮೊದಲು ಚೆನ್ನಾಗಿ ಓದಲು ಕಲಿಯಬೇಕು. ಬೇರೆ ಕಡೆ ಬಂದ ಇಂಥ ಅಂಕಣಗಳನ್ನು ಚೆನ್ನಾಗಿ ಓದುತ್ತ, ಅಲ್ಲಿ ಮಕ್ಕಳು ಬರೆದುದನ್ನು ಅರ್ಥ ಮಾಡಿಕೊಳ್ಳುತ್ತ, ಅವರು ಹೇಗೆ ಬರೆಯುತ್ತಾರೆ, ಎಂಥೆಂಥ ವಿಷಯ ಆಯ್ಕೆ ಮಾಡುತ್ತಾರೆ ಎಂಬುದನ್ನೆಲ್ಲ ಗಮನಿಸಿ, ಕಲಿಯಬೇಕು. ಆಗ ಮಾತ್ರ ತನ್ನಲ್ಲಿರುವ ಪ್ರತಿಭೆ ಅರಳಲು ಸಾಧ್ಯವಾಗುತ್ತದೆ. ಸೂರ್ಯ ಕಿರಣವೋ, ತಂಗಾಳಿಯೋ, ಇಬ್ಬನಿಯೋ ತಾಗದಿದ್ದರೆ ಮೊಗ್ಗು ಅರಳದೆ ಮುದುಡಿ ಹೋಗಬಹುದಲ್ವ? ಹಾಗೆಯೇ ಪ್ರತಿಭೆಯೆಂಬ ಮೊಗ್ಗು ಕೂಡ. ಸರಿಯಾ ?

ಮತ್ತೆ, ಬರೆದು ಕಳಿಸಿದ ತಕ್ಷಣ ಪ್ರಕಟವಾಗದಿರಬಹುದು. ಪ್ರಕಟಣೆಗೆ ಸಮಯ ಬೇಕಾಗಬಹುದು. ಆದರೂ, ಪ್ರಕಟಣೆಗೆ ಆಯ್ಕೆಯಾಗಿದೆಯೋ ಇಲ್ಲವೋ ಎಂಬ ಕುತೂಹಲ ತಣಿಯಬೇಕೆಂದಿದ್ದರೆ ನೀವು ಕಳಿಸುವ ಕವರಿನೊಳಗೇ ನಿಮ್ಮ ವಿಳಾಸ ಬರೆದ ಒಂದು ಪೋಸ್ಟ್ ಕಾರ್ಡನ್ನೂ ಇಟ್ಟು ಬಿಡಿ. ಆಯ್ಕೆಯಾಗಿದೆ ಅಥವಾ ಇಲ್ಲ ಎಂಬುದನ್ನು ನಾವು ಸುಮಾರು 10 ದಿನದೊಳಗೆ ಅದರಲ್ಲಿ ಬರೆದು ತಿಳಿಸುತ್ತೇವೆ.

ಇನ್ನು ಇಷ್ಟೆಲ್ಲ ಮಾಡಲು ಬಾರದ ಪುಟಾಣಿಗಳಿಗೆ ಅವರ ದೊಡ್ಡವರು ಖಂಡಿತಾ ಸಹಾಯ ಮಾಡಬೇಕಾಗುತ್ತೆ. ಸುಮ್ಮನೆ ಸಮಯದಲ್ಲಿ ಕೇಳಿದರೆ ಅವರು ಸಹಾಯ ಮಾಡೇ ಮಾಡ್ತಾರೆ. ಯಾಕೆ ಆಗೂದಿಲ್ಲ ಅಂತಾರೆ ಅಲ್ವಾ ?

ಸಾಕು, ಈ ಪುರಾಣವೇ ಜಾಸ್ತಿ ಆಯ್ತು ಅಲ್ವಾ ಮಕ್ಕಳೇ? ಆದರೆ ಇದರಲ್ಲಿ ಯಾವುದಾದ್ರೂ ವಿಷಯ ನಿಮ್ಗೆ ಗೊತ್ತಿಲ್ಲದಿದ್ರೆ ಆಗುತ್ತಾ, ಹೇಳಿ ?

ಹಾಂ. ಈ ವಾರದಿಂದಲೇ ಶುರು ಮಾಡೋಣವಾ ಹಾಗಾದರೆ? ಇಲ್ಲಿ ಒಂದು ಪುಟ್ಟ ಕವನ ಪ್ರಕಟಿಸಿದ್ದೇವೆ. ಓದಿ ನೋಡಿ. ನೀವು ಇನ್ನೂ ಚೆನ್ನಾಗಿ ಕೂಡ ಬರೆಯಬಹುದು. ಕತೆ, ನಗೆಹನಿ, ಚಿಕ್ಕ ಚಿಕ್ಕ ನಾಟಕ, ಇದು ನಿಮಗೆ ಗೊತ್ತ ?– ಇಂಥ ಇನ್ನೂ ಎಷ್ಟೋ ವಿಷಯಗಳನ್ನೂ ಬರೆಯಬಹುದು. ಬರೀತೀರಲ್ವ ?

ಅಂದ ಹಾಗೆ ನಿಮ್ಮ ಅಂಕಣಕ್ಕೊಂದು ಹೆಸರು ನೀವೇ ಇಡೋದು ಜ್ಞಾಪಕವುಂಟಲ್ಲ ? ಬೇಗ ! ಯಾರು ಫಸ್ಟ್ ಅಂತ ನೋಡೋಣಾ ?

ಇಂತು ನಿಮ್ಮನ್ನೆಲ್ಲ ಪ್ರೀತಿಸುವ,

ಸಿರಿಮನೆ ನಾಗರಾಜ್.

ವಿಳಾಸ: ಸಂಪಾದಕರು,
'ಮುಂಜಾವು' ವಾರಪತ್ರಿಕೆ,
ಕೊಪ್ಪ, ಚಿಕ್ಕಮಗಳೂರು ಜಿಲ್ಲೆ.

ನನ್ನಾಸೆ

ಹಕ್ಕಿಯಂತೆ ಹಾರುವಾಸೆ
ನವಿಲಿನಂತೆ ಕುಣಿಯುವಾಸೆ
ಕೋಗಿಲೆಯಂತೆ ಹಾಡುವಾಸೆ
ಜಿಂಕೆಯಂತೆ ಓಡುವಾಸೆ
ನೀರಿನಲ್ಲಿ ಆಡುವಾಸೆ
ಬೆಟ್ಟವನ್ನು ಏರುವಾಸೆ
ನದಿಗಳಂತೆ ಹರಿಯುವಾಸೆ
ಮೋಡದಂತೆ ಚಲಿಸುವಾಸೆ .

—ಎಚ್. ಬಿ. ಸಂದೇಶ್
7ನೇ ತರಗತಿ, ಹರಿಹರಪುರ

ಕರ್ನಾಟಕದಲ್ಲಿ ರಬ್ಬರು ಬೆಳೆಯ ಆಶೋತ್ತರಗಳು

(2ನೇ ಪುಟದಿಂದ)

[illegible] ಸಾಮಾನ್ಯ ರೂ. 24,000 [illegible] ಹೊರತಾದ ನಿವ್ವಳ ಲಾಭ [illegible] 10,000 ದಿಂದ 15,000 ರೂಪಾಯಿಗಳ [illegible] ಇರುತ್ತದೆ.

ರಬ್ಬರು ಬೆಳೆಸುವುದರಿಂದ [illegible] ಆರ್ಥಿಕ [illegible] ಗಳಿಂದ [illegible]:

1. ಉಪಯೋಗಕ್ಕೆ ಬಾರದ [illegible] ಕೃಷಿ ಯೋಗ್ಯ ಭೂಮಿಗಳನ್ನು [illegible] ಲಾಭದಾಯಕವಾಗಿ ಮತ್ತು ಫಲಪ್ರದವಾಗಿ [illegible] ವುದು;

2. ಗ್ರಾಮೀಣ ಉದ್ಯೋಗಾವಕಾಶ ಹೆಚ್ಚಿಸುವುದು;

3. ಮಣ್ಣು ಸವಕಳಿ ತಡೆಯುವುದು;

4. ಪರಿಸರ ಸಂವೃದ್ಧಿ ಸಾಧನೆ;

5. ರಬ್ಬರು ಮೂಲವಾದ ಹೊಸ ಹೊಸ ಕೈಗಾರಿಕೆಗಳಿಗೆ ಅವಕಾಶ;

6. ಮರ-ಮಟ್ಟು, ಎಣ್ಣೆ, [illegible] ಮತ್ತು ಜೇನು ಸಿಗುವುದು;

7. [illegible] ಯ ವರಮಾನದ ಹೆಚ್ಚಳ.

[illegible] ಸ್ವಾಭಾವಿಕ ರಬ್ಬರು [illegible] ವನೆ [illegible] 2 ಲಕ್ಷ 20 ಸಾವಿರ ಟನ್ನುಗಳು ಮತ್ತು ಅಗತ್ಯವಿರುವ ಬೇಡಿಕೆ 2 ಲಕ್ಷ 55 ಸಾವಿರ ಟನ್ನುಗಳು. 2000ನೇ ಇಸವಿಯ ಹೊತ್ತಿಗೆ ಅಗತ್ಯವಾಗುವ ಬೇಡಿಕೆ 5 ಲಕ್ಷ ಟನ್ನುಗಳು. ಹೆಚ್ಚಾಗುವ ಈ ಬೇಡಿಕೆಯ ಮೊತ್ತ ಈಗಾಗಲೇ ರಬ್ಬರು ಬೆಳೆಯುವ ಪ್ರದೇಶಗಳಿಂದ ಹೊರಗಿರುವ ಕರ್ನಾಟಕದಂತಹ ರಬ್ಬರು ಬೆಳೆಗೆ ಹಿಡಿಸಬಹುದಾದ ಪ್ರದೇಶಗಳಿಂದಲೇ ಪೂರೈಕೆಯಾಗಬೇಕು.

ಕರ್ನಾಟಕ ರಾಜ್ಯದಲ್ಲಿ ರಬ್ಬರು ಬೆಳೆಯನ್ನು ವಿಸ್ತರಿಸಿ ಅಭಿವೃದ್ಧಿ ಪಡಿಸುವ ಕಾರ್ಯ ಕೈಗೊಳ್ಳುವುದಕ್ಕಾಗಿ ರಬ್ಬರು ಬೋರ್ಡ್ ಈಗಾಗಲೇ ಮಂಗಳೂರಿನಲ್ಲೊಂದು ಪೂರ್ಣ ಪ್ರಮಾಣದ ವಲಯ ಕಚೇರಿಯನ್ನು ಸ್ಥಾಪಿಸಿದೆ. ಆಯಕಟ್ಟಿನ ಸ್ಥಳಗಳಾದ [illegible], ಬೆಳ್ತಂಗಡಿ, ಕುಂದಾಪುರ, ಪುತ್ತೂರುಗಳಲ್ಲಿ ಈ ವಲಯ ಕಚೇರಿಯ ಅಧೀನದಲ್ಲಿ ಕೆಲಸ ಮಾಡುವ ಕ್ಷೇತ್ರ ವಿಸ್ತರಣಾ ಕೇಂದ್ರಗಳನ್ನು ತೆರೆಯಲಾಗಿದೆ. ಕರ್ನಾಟಕಕ್ಕೆ ಹೊಂದಿಕೆಯಾಗುವ ಹೊಸ ರಬ್ಬರು ತಳಿಗಳನ್ನು ಸೃಷ್ಟಿಸುವ ಕಾರ್ಯಕ್ಕಾಗಿ ಭಾರತೀಯ ರಬ್ಬರು ಸಂಶೋಧನಾ ಸಂಸ್ಥೆಯ ವತಿಯಿಂದ ಸುಬ್ರಮಣ್ಯದಲ್ಲಿ 50 [illegible] ಕ್ಟೇರು ವಿಸ್ತಾರದ ಒಂದು ತಳಿವೃದ್ಧಿ ತಾಣ (ಸಂಗೋಪನಾ ಕೇಂದ್ರ)ವನ್ನು [illegible] ಲಾಗುತ್ತದೆ. ರಬ್ಬರು ಕೃಷಿ ಮತ್ತು ಉತ್ಪಾದನೆಯ ಕಾರ್ಯಾಚರಣೆಗಳಲ್ಲಿ ಎದುರಾಗುವ ಸಮಸ್ಯೆಗಳನ್ನು ಸಂಶೋಧಿಸಿ ಪರಿಹರಿಸುವ ಚಟುವಟಿಕೆಗಾಗಿ ಮತ್ತೊಂದು [illegible] ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಕೂಡ ಈ ಸಂಸ್ಥೆ ಯೋಜಿಸಿದ್ದು, ಇದಕ್ಕೆ ಅವಶ್ಯವುಳ್ಳ ಭೂಮಿಯನ್ನೊದಗಿಸಲು ರಾಜ್ಯ ಸರ್ಕಾರವನ್ನು ಕೇಳಿಕೊಳ್ಳಲಾಗಿದೆ.

ಮೂಲ: ಪಿ. ಕೆ. ನಾರಾಯಣನ್.
ಕನ್ನಡಕ್ಕೆ: ತಂ.ಪಾ. ದೈತೋಟ.

ಓದುಗರ ಪತ್ರ

ಮಂಡಲ ಪಂಚಾಯ್ತಿಗಳಿಗೆ ಸದಸ್ಯರ ನಾಮಕರಣ ಭಾಜಪಾ ವಿರೋಧ

ಮಾನ್ಯರೆ,

ಮಂಡಲ ಪಂಚಾಯ್ತಿ ಚುನಾವಣೆಗಳು ಪೂರ್ಣಗೊಂಡಿದ್ದರೂ ಪ್ರಧಾನ ಮತ್ತು ಉಪ ಪ್ರಧಾನರ ಚುನಾವಣೆಗಳನ್ನು ಸರ್ಕಾರ ಉದ್ದೇಶಪೂರ್ವಕವಾಗಿ ಮುಂದೂಡಿರುವುದು ವಿಷಾದಕರ. ಸುಮಾರು 300 ಮಂಡಲಗಳು ಆಳುವ ಜನತಾ ಪಕ್ಷದ ಕೈ ಬಿಡುವ ಕಾರಣ ಸದಸ್ಯರ ನಾಮ ನಿರ್ದೇಶನದ ಮುಖಾಂತರ ಆ ಮಂಡಲಗಳನ್ನು ತಮ್ಮ ಕಕ್ಷೆಗೆ ತರುವ ಆಳುವ ಪಕ್ಷದ ಈ ಸನ್ನಾಹಕ್ಕೆ ಈಗಾಗಲೇ ಅನೇಕ ವೇದಿಕೆಗಳಲ್ಲಿ ವಿರೋಧ ವ್ಯಕ್ತವಾಗಿದ್ದು, ಇದು ಜನಾಭಿಪ್ರಾಯ ಇದಕ್ಕೆ ವಿರೋಧವಾಗಿದೆ.

ಆದರೆ, ಜನತಾ ಪಕ್ಷದವರು ನಾಮಕರಣಕ್ಕಾಗಿ ಈಗಾಗಲೇ ಪಟ್ಟಿ ತಯಾರು ಮಾಡುತ್ತಿದ್ದಾರೆಂದು ಗೊತ್ತಾಗಿದೆ. ಈ ರೀತಿ ಏಕ ಪಕ್ಷೀಯವಾಗಿ ನಾಮ ನಿರ್ದೇಶನ ಮಾಡುವುದನ್ನು ಪಕ್ಷಭೇದ ಮರೆತು ಎಲ್ಲ ನಾಗರಿಕರು ತೀವ್ರವಾಗಿ ವಿರೋಧಿಸಬೇಕೆಂದು ಕೊಪ್ಪ ತಾ॥ ಭಾರತೀಯ ಜನತಾ ಪಕ್ಷ ಆಹ್ವಾನಿಸುತ್ತದೆ.

—ಬಿ.ಎಂ. ರಘುನಾಥ್,
ಅಧ್ಯಕ್ಷ, ಕೊಪ್ಪ ತಾ॥ ಭಾಜಪ

ಹಿಂದುಳಿದ ವರ್ಗಗಳು, ಮತೀಯ ಅಲ್ಪಸಂಖ್ಯಾತರಿಗಾಗಿ "ಸ್ವಾವಲಂಬನಾ ಯೋಜನೆ"

ಚಿಕ್ಕಮಗಳೂರು : ರಾಜ್ಯ ಸರ್ಕಾರವು ಆರಂಭಿಸಿರುವ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ, ಆಯಾ ಜಿಲ್ಲೆಗಳ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ ಅಧಿಕಾರಿಗಳ ಮೂಲಕ 'ಸ್ವಾವಲಂಬನಾ ಯೋಜನೆ'ಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯಲ್ಲಿ 191 ಸ್ಕೀಂಗಳಿದ್ದು, ಅರ್ಹ ಅಭ್ಯರ್ಥಿಗಳಿಗೆ ಗರಿಷ್ಠ 25 ಸಾವಿರ ರೂ ವರೆಗೆ ಸಾಲಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ದೊರಕಿಸಲಾಗುತ್ತದೆ. ಅದರಲ್ಲಿ ನಿಗಮವು ಶೇ. 4ರ ಬಡ್ಡಿಯಂತೆ ಸಾಲು ಧನವನ್ನು ಈ ಕೆಳಗಿನಂತೆ ನೀಡುತ್ತದೆ:

5000 ರೂ. ವರೆಗಿನ ಸಾಲಕ್ಕೆ ಶೇ. 50, 5ರಿಂದ 10 ಸಾವಿರಕ್ಕೆ ಶೇ. 30 ಮತ್ತು 10ರಿಂದ 25 ಸಾವಿರಕ್ಕೆ ಶೇ. 20

ನಿಬಂಧನೆಗಳು

1. ಅರ್ಜಿದಾರರು ಮತೀಯ ಅಲ್ಪ ಸಂಖ್ಯಾತರಾಗಿರಬೇಕು. (ಮುಸ್ಲಿಂ, ಕ್ರೈಸ್ತ ಜೈನ, ಬೌದ್ಧ, ಸಿಖ್, ಆಂಗ್ಲೋ ಇಂಡಿಯನ್ ಮತ್ತು ಪಾರ್ಸಿ.)

2. ಅರ್ಜಿದಾರರು ಹುಟ್ಟಿನಿಂದ ಇಲ್ಲವೆ ನೆಲೆಸುವಿಕೆಯಿಂದ ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು.

3. ಅರ್ಜಿದಾರನು ಕುಶಲಕರ್ಮಿಯಾದಲ್ಲಿ ಅವನು ಬಯಸುವ ಉದ್ದಿಮೆಯಲ್ಲಿ ವಿದ್ಯಾವಂತನಾಗಿರಬೇಕು, ಇಲ್ಲವೆ ಉದ್ಯಮ ಕಲಿ ಅಥವಾ ಕೈಗಾರಿಕೆಯಲ್ಲಿ ತರಬೇತಿ ಪಡೆದವನಾಗಿರಬೇಕು.

4. ಸಹಕಾರ ಸಂಘವಾದಲ್ಲಿ ಅದು ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರ ಕ್ಷೇಮಾಭಿವೃದ್ಧಿಗೋಸ್ಕರವೇ ನೊಂದಾಯಿಸಲ್ಪಟ್ಟಿರಬೇಕು.

5. ಕುಟುಂಬದ ಎಲ್ಲಾ ಮೂಲಗಳಿಂದ ಒಟ್ಟು ವಾರ್ಷಿಕ ವರಮಾನ ರೂ. 6000 ಕ್ಕಿಂತ ಹೆಚ್ಚಿರಬಾರದು.

6. ಸಾಲ ಮಂಜೂರು ಮಾಡುವುದಕ್ಕೆ ಮುಂಚಿತವಾಗಿ ನಿಗಮದ ನಿರ್ದೇಶಕರ ಮಂಡಳಿಯು ವಿಧಿಸುವ ಇನ್ನಿತರ ನಿಬಂಧನೆಗಳನ್ನು ಅರ್ಜಿದಾರರು ಪೂರೈಸಬೇಕು.

ಹೆಚ್ಚಿನ ಮಾಹಿತಿಗಳನ್ನು ಹಾಗೂ ಸಾಲದ ಅರ್ಜಿ ಫಾರಂಗಳನ್ನು (ಅರ್ಜಿ ಶುಲ್ಕ 2 ರೂ.) ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಅಧಿಕಾರಿಗಳ ಕಛೇರಿಯಿಂದ ಪಡೆಯಬಹುದು.

'ಡಿ ಗ್ರೂಪ್' ನೌ॥ ಸಂಘದ ಕಟ್ಟಡಕ್ಕೆ ಶಂಕುಸ್ಥಾಪನೆ

ಶೃಂಗೇರಿ: ಕರ್ನಾಟಕ ರಾಜ್ಯ 'ಡಿ ಗ್ರೂಪ್' ನೌಕರರ ಸಂಘದ ಶೃಂಗೇರಿ ಶಾಖೆಯ ಕಟ್ಟಡದ ಶಂಕುಸ್ಥಾಪನೆಯನ್ನು ಫೆ. 22ರಂದು ಜಿಲ್ಲಾ ಸಂಘದ ಅಧ್ಯಕ್ಷ ಡಿ. ಗೋವಿಂದಪ್ಪನವರ ಅಧ್ಯಕ್ಷತೆಯಲ್ಲಿ ಮೂಡಿಗೆರೆ ತಾ॥ ಸಂಘದ ಅಧ್ಯಕ್ಷ ಶಿವನಂಜೇಗೌಡ ನೆರವೇರಿಸಿದರು. ಶೃಂಗೇರಿ ತಾ॥ ವಾಹನ ಚಾಲಕರ ಸಂಘದ ಸಂಚಾಲಕ ಬಾಲಕೃಷ್ಣ ಈ ಸಂಘಕ್ಕೆ ತಮ್ಮ ಸಂಘದ ವತಿಯಿಂದ ಧನ ಸಹಾಯ ಮತ್ತು ಪೀಠೋಪಕರಣ ನೀಡುವ ಆಶ್ವಾಸನೆ ನೀಡಿದರು. ಸೀತಾರಾಮನಾಯ್ಕ ಸ್ವಾಗತಿಸಿ, ಗವಿಸಿದ್ಧಪ್ಪ ವಂದಿಸಿದರು.

1987–88ನೇ ಸಾಲಿಗೆ ಪದಾಧಿಕಾರಿಗಳು: ಸೀತಾರಾಮ ನಾಯ್ಕ (ಅಧ್ಯಕ್ಷ), ಕೃಷ್ಣಮೂರ್ತಿ, ಪ್ರೇಮಮ್ಮ (ಉಪಾಧ್ಯಕ್ಷರು), ಶ್ರೀನಿವಾಸ (ಕಾರ್ಯದರ್ಶಿ), ಅಬ್ದುಲ್ ಸತ್ತಾರ್ (ಖಜಾಂಚಿ) ಮತ್ತು 10 ಜನ ಕಾರ್ಯಕಾರಿಣಿ ಸದಸ್ಯರು.

ಸ॥ ನೌಕರರ ಕ್ರೀಡಾಕೂಟ ಮುಕ್ತಾಯ

ಕೊಪ್ಪ: ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಆಶ್ರಯದಲ್ಲಿ ಫೆ. 15ರಂದು ತಾ॥ ಮಟ್ಟದ ಸರ್ಕಾರಿ ನೌಕರರ ಷಟಲ್ ಬ್ಯಾಡ್‌ಮಿಂಟನ್ ಟೂರ್ನಿ ನಡೆದು, ಕೊಪ್ಪದ ಡಾ॥ ಎಂ.ಜಿ. ಪ್ರಸಾದ್ ಮತ್ತು ಕಮ್ಮರಡಿಯ ಡಾ॥ ರಾಜಣ್ಣ ಇವರ ಜೋಡಿ ಕಮ್ಮರಡಿಯ ರಾಮಚಂದ್ರ ಮತ್ತು ಭಾಸ್ಕರಾಚಾರ್ (ಆರೋಗ್ಯ ಇಲಾಖೆ) ಜೋಡಿಯ ಮೇಲೆ ಜಯ ಸಾಧಿಸಿದರು

ಫೆ. 22ರ ಸ್ಪರ್ಧೆಗಳ ಛಾಂಪಿಯನ್ಸ್

ಜೂನಿಯರ್ಸ್ (35 ವರ್ಷಕ್ಕಿಂತ ಕಮ್ಮಿ) ಡಾ॥ ಸಿ.ಕೆ. ಪದ್ಮಾವತಿ (ಚೆಂಡು ಎಸೆತ–1 50 ಮೀ.–2, ಗುಂಡೆಸೆತ–2); ಮೋಹನ ಗೌಡ (800 ಮೀ., ಗುಂಡೆಸೆತ, ಚಂಡೆಸೆತ ಈಟಿ ಎಸೆತ–1, ದೂರ ಜಗಿತ–3)

ಸೀನಿಯರ್ಸ್: ನಸೀಮ್ ಫಾತಿಮಾ (ಚೆಂಡೆಸೆತ, ಮ್ಯೂ. ಚೇರ್–1, 50 ಮೀ ಓಟ, ನಡಿಗೆ, ಗುಂಡೆಸೆತ–2); ಸತ್ಯಮೂರ್ತಿ (800 ಮೀ., ಚೆಂಡೆಸೆತ, ಉದ್ದ ಜಗಿತ, ಎತ್ತರ ಜಗಿತ–1, ಗುಂಡೆಸೆತ–3)

ಸಮಾರೋಪ ಸಭೆ

ಅಧ್ಯಕ್ಷತೆ: ಕೆ.ಎಸ್. ರಾಮಣ್ಣ, ಸಂಘದ ಅಧ್ಯಕ್ಷರು; ಬಹುಮಾನ ವಿತರಣೆ: ಡಾ॥ ಎಂ. ಜಿ. ಪ್ರಸಾದ್; ಸ್ವಾಗತ: ಎಂ. ನಾರಾಯಣ; ವಂದನಾರ್ಪಣೆ: ಕೆ. ಎಸ್. ಸುಬ್ರಮಣ್ಯ, ಕಾರ್ಯದರ್ಶಿ.

ಅಡಿಕೆ ಧಾರಣೆ

ಶಿವಮೊಗ್ಗ ತಾ॥ 23.2.1987

ಸರಕು :	2800 – 3750
ಬೆಟ್ಟೆ :	1734 – 2106
ಗೊರಬಲು :	700 –1190

ಹರಿಹರಪುರ ರಾಷ್ಟ್ರೋತ್ಥಾನ ಬಳಗದ ಆಶ್ರಯದಲ್ಲಿ ಯಶಸ್ವಿ ಉಚಿತ ವೈದ್ಯಕೀಯ ಶಿಬಿರ

(ವರದಿ: ಸುಧೀರ್ ಆನಂದೂರು)

ಹರಿಹರಪುರ: ಇಲ್ಲಿ ಫೆ. 22ರಂದು ರಾಷ್ಟ್ರೋತ್ಥಾನ ಬಳಗ ಏರ್ಪಡಿಸಿದ್ದ ಉಚಿತ ವೈದ್ಯಕೀಯ ಶಿಬಿರದಲ್ಲಿ ಸುತ್ತಮುತ್ತಲ ಹಳ್ಳಿಗಳ 300ಕ್ಕೂ ಹೆಚ್ಚು ರೋಗಿಗಳನ್ನು ಪರೀಕ್ಷಿಸಿ, ಉಚಿತ ಔಷಧಿಗಳನ್ನು ನೀಡಲಾಯಿತು. ಈ ಪೈಕಿ ಸುಮಾರು 150 ಮಂದಿ ದಂತ ಚಿಕಿತ್ಸೆ, 125 ಮಂದಿಗೆ ಮೂಳೆ ಮತ್ತು ಕೀಲುಗಳ ಚಿಕಿತ್ಸೆ ಹಾಗೂ 90 ಮಕ್ಕಳಿಗೆ ವಿವಿಧ ರೀತಿಯ ಚಿಕಿತ್ಸೆ ನೀಡಲಾಯಿತು.

ಶಿಬಿರದಲ್ಲಿ ಡಾ॥ ಎಚ್. ಮಂಜುನಾಥ್ (ದಂತವೈದ್ಯರು), ಡಾ॥ ಪಿ. ವಾಸುದೇವ ಕಾಮತ್ (ಮೂಳೆ ತಜ್ಞರು) ಹಾಗೂ ಡಾ॥ ಲಕ್ಷ್ಮೀನಾರಾಯಣ್ (ಮಕ್ಕಳ ತಜ್ಞರು, ವೈದ್ಯಾಧಿಕಾರಿಗಳು, ಶೃಂಗೇರಿ) ಇವರುಗಳು ಪಾಲ್ಗೊಂಡಿದ್ದರು. ಸ್ಥಳೀಯ ವೈದ್ಯಾಧಿಕಾರಿ ಡಾ॥ ಎ.ಪಿ. ತಿಮ್ಮಪ್ಪ ಶಿಬಿರ ಉದ್ಘಾಟಿಸಿದರು.

ಶಿಬಿರದ ಅಂಗವಾಗಿ ನಡೆದ ಮಕ್ಕಳ ಪ್ರದರ್ಶನದಲ್ಲಿ ಸುಮಾರು 20 ಮಕ್ಕಳು ಪಾಲ್ಗೊಂಡಿದ್ದರು. ನಿಶ್ಚಲ, ಪೂಜಾ ಮತ್ತು ರಾಜಶ್ರೀ ಕ್ರಮವಾಗಿ ಮೊದಲ 3 ಬಹುಮಾನಗಳನ್ನೂ, ಸಂದೀಪ್, ಶಿಲ್ಪ, ವರುಣ ಸಮಾಧಾನಕರ ಬಹುಮಾನಗಳನ್ನೂ ಗಳಿಸಿದರು.

ಸಂಜೆ ನಡೆದ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಹರಿಹರಪುರ ಮಠಾಧೀಶರು ಆಶೀರ್ವಚನ ನೀಡಿದರು. ಸಾರ್ವಜನಿಕರ ಪರವಾಗಿ ಬಿ. ಸುಬ್ರಮಣ್ಯಂ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಇಂಥ ಶಿಬಿರಗಳು ಹೆಚ್ಚು ಹೆಚ್ಚಾಗಿ ಏರ್ಪಡಲೆಂದು ಹಾರೈಸಿದರು. ಮಕ್ಕಳ ಪ್ರದರ್ಶನದ ವಿಜೇತ ಮಕ್ಕಳಿಗೆ ಶ್ರೀದೇವಿ ರಾಘವಾಚಾರ್ ಬಹುಮಾನ ವಿತರಿಸಿದರು.

ಬಳಗದ ಸಂಚಾಲಕ ಕೆ.ಜಿ. ಎನ್. ಶಾಸ್ತ್ರಿ ಸ್ವಾಗತಿಸಿ, ಎಸ್. ವಿ. ಅಡಿಗ ವಂದಿಸಿದರು. ಸಾರ್ವಜನಿಕರು, ಶಾಲೆ–ಕಾಲೇಜುಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿ ಸಮೂಹ ಹಾಗೂ ಸ್ಥಳೀಯ ವೈದ್ಯರು ಶಿಬಿರದ ಯಶಸ್ಸಿಗೆ ಸಹಕರಿಸಿದರು.

ಏಲಕ್ಕಿ ಧಾರಣೆ

ಸಕಲೇಶಪುರ

ತಾರೀಕು	ಗರಿಷ್ಠ	ಸರಾಸರಿ
9.2.87	120	85
10.2.87	200	101
11.2.87	160	115
12.2.87	200	105
13.2.87	202	111

ಚಂದಾ ಹಣ ಕಳಿಸಿ

ಸ ಹ ಕ ರಿ ಸಿ

ವಾರ್ಷಿಕ ಚಂದಾ 25 ರೂ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸೀತಾನದಿ ನಾಗರಾಜ್, ಅಚ್ಚು: ದೀಪಿಕಾ ಅಚ್ಚು ಕೂಟ, ಕೊಪ್ಪ.